**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.50/2021

ಸಾಕ್ಷಿಯನ್ನು ದಿಃ **27.06.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಯ ಮೇಲಿನ ಆದೇಶದಂತೆ ಮುಂದುವರಿದ ಪಾಟೀ ಸವಾಲುಃ** 1 **ರಿಂದ** 4**ನೇ ಪ್ರತಿವಾದಿಯರ ಪರಃಶ್ರೀ**. BSY **ವಕೀಲರಿಂದ**:

ಈ ದಾವೆಯ ಎಲ್ಲಾ ವಿದ್ಯಾಮಾನಗಳು ನನ್ನ ತಂದೆಯಿಂದ ನನಗೆ ಗೊತ್ತಿದೆ. ಮೊದಲನೇ ಕರಾರು ದಿಃ 28.04.2014 ರಲ್ಲಿ ಆಗಿದೆ. ನಂತರ ಇನ್ನೊಂದು ಕರಾರು ದಿಃ 04.08.2014 ರಲ್ಲಿ ಆಗಿದೆ. 2ನೇ ಕರಾರು ಪತ್ರ ಜಮೀನು ಮಾರಾಟ ಮಾಡಿ ಸ್ವಾಧೀನ ಬಿಟ್ಟುಕೊಟ್ಟ ಬಗ್ಗೆ ಆಗಿದೆ. ಅದು ಕ್ರಯ ಪತ್ರವಾಗಿದೆ ಎಂದರೆ ಇಲ್ಲ ಕ್ರಯದ ಕರಾರು ಆಗಿದೆ. ದಿಃ 04.08.2014 ರಂದು ಆದ ಕರಾರು ಪತ್ರದ 3 ವರ್ಷದ ಒಳಗೆ ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿದ್ದಿರಾ ಎಂದರೆ ಇಲ್ಲ. ನೋಟಿಸನ್ನು 2018 ರಲ್ಲಿ ನೀಡಲಾಗಿದೆ. 2014 ರಿಂದ 2018ರ ಮಧ್ಯದಲ್ಲಿ ಯಾವುದೇ ನೋಟಿಸನ್ನು ಪ್ರತಿವಾದಿಯರಿಗೆ ಕೊಟ್ಟಿಲ್ಲ. 2014 ರಿಂದ 3 ವರ್ಷದ ಒಳಗೆ ಪ್ರತಿವಾದಿಯರಿಗೆ ಯಾವುದೇ ನೋಟಿಸ್ ಕೊಡದೇ ಇರುವ ಕಾರಣ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹರಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ಪ್ರತಿವಾದಿಯರ ವಯಸ್ಸನ್ನು ಯಾರು ನೀಡಿದ್ದಾರೆ ಎಂದರೆ 1ನೇ ಪ್ರತಿವಾದಿ ಕೊಟ್ಟಿದ್ದಾರೆ. ನಿಪಿ-5 ಮತ್ತು 6 ರ ಕ್ರಯದ ಕರಾರಿನಲ್ಲಿ ಪ್ರತಿವಾದಿಯರ ವಯಸ್ಸನ್ನು ನಮೂದಿಸಿಲ್ಲ ಎಂದರೆ ನಮೂದಿಸಲಾಗಿದೆ. ನಿಪಿ-5 ಮತ್ತು 6 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಪ್ರತಿವಾದಿಯರ ವಯಸ್ಸು ಬರೆದಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಯುರು ಅವಿದ್ಯಾವಂತರಾದ ಕಾರಣ ಅದನ್ನು ಉಪಯೋಗಿಸಿಕೊಂಡು ನಮ್ಮ ಅನುಕೂಲಕ್ಕೆ ತಕ್ಕಂತೆ ನಿಪಿ-5 ಮತ್ತು 6 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2014 ರಲ್ಲಿ 3 ಮತ್ತು 4ನೇ ಪ್ರತಿವಾದಿಯುರು ವಯಸ್ಕರಾಗಿದ್ದರೂ ಸಹ ಅವರು ಅಪ್ರಾಪ್ತ ವಯಸ್ಕರು ಎಂದು ಕ್ರಯದ ಕರಾರಿನಲ್ಲಿ ನಾವು ನಮೂದಿಸಿದ್ದೇವೆ ಎಂದರೆ ಸರಿಯಲ್ಲ. 3 ಮತ್ತು 4ನೇ

ಪ್ರತಿವಾದಿಯರು ಅಪ್ರಾಪ್ತ ವಯಸ್ಕರು ಎಂದು ತೋರಿಸುವ ಬಗ್ಗೆ ದಾಖಲೆಯನ್ನು ಅವರು ತೋರಿಸಿದ್ದಾರೆ. ಯಾವ ದಾಖಲೆ ನೋಡಿದ್ದೀರಿ ಎಂದರೆ ಆಧಾರ್ ಕಾರ್ಡ್ ನ್ನು ನೋಡಿದ್ದೇವೆ. ಆಧಾರ್ ಕಾರ್ಡ್ ನ ಪ್ರತಿಯನ್ನು ಪಡೆದುಕೊಂಡಿಲ್ಲ. 3 ಮತ್ತು 4ನೇ ಪ್ರತಿವಾದಿಯರ ಆಧಾರ್ ಕಾರ್ಡ್ ನ್ನು ನೋಡಿಲ್ಲ ಎಂದರೆ ಸರಿಯಲ್ಲ. ದಾಖಲೆಯನ್ನು ಸೃಷ್ಟಿ ಮಾಡುವ ಕಾರಣಕ್ಕಾಗಿ ಅವರು ಅಪ್ರಾಪ್ತ ವಯಸ್ಕರು ಎಂದು ಕರಾರಿನಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ–5 ಮತ್ತು 6ರ ಕರಾರನ್ನು ಹೊರತುಪಡಿಸಿ ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದು ತೋರಿಸುವ ಬಗ್ಗೆ ದಾಖಲೆ ಇದೆಯೇ ಎಂದರೆ ಪೋಲಿಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದಾರೆ. ಈ ದಾವೆ ಚಾಲ್ತಿಯಲ್ಲಿರುವಾಗ ನಾವು ಪೋಲಿಸ್ ಠಾಣೆಗೆ ದೂರನ್ನು ಕೊಟ್ಟು ಪ್ರತಿವಾದಿಯನ್ನು ಪೋಲಿಸ್ ಬಂಧನಕ್ಕೊಳಪಡಿಸಿ ಅವರಿಂದ ಕೆಲವು ದಾಖಲೆಗಳನ್ನು ಬಲವಂತವಾಗಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ . ವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದು ಪ್ರತಿವಾದಿಯರು ಪೋಲಿಸ್ ಠಾಣೆಯಲ್ಲಿ ಬರೆದುಕೊಟ್ಟಿದ್ದಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ನಾವು ಪೋಲಿಸ್ ಠಾಣೆಯಲ್ಲಿ ಪ್ರತಿವಾದಿಯರಿಂದ *ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಸಿವಿಲ್ ದಾವೆ ಇತ್ಯರ್ಥ ಆಗುವವರೆಗೆ ನಿಮಗೆ ತೊಂದರೆ ಮಾಡುವುದಿಲ್ಲ. ಹಾಗೇನಾದರೂ ನಾವು ಹೋದಲ್ಲಿ ನಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಬಹುದು ಎಂದು ಒತ್ತಾಯ ಪೂರ್ವಕವಾಗಿ ನಿಪಿ–4 ರಂತೆ ಬರೆಸಿಕೊಂಡಿದ್ದೇವೆ* ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಪೊಲಿಸರೊಂದಿಗೆ ಶಾಮಿಲಾಗಿ ನಿಪಿ–4ನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್

ಪ್ರತಿವಾದಿಯರಿಗೆ ದಾವಾ ಸ್ವತ್ತು ಹೇಗೆ ಬಂತು ಎಂಬ ಬಗ್ಗೆ ದಾಖಲೆ ನೋಡಿದ್ದೇವೆ ಮತ್ತು ನಮಗೆ ದಾಖಲೆಯನ್ನು ಕೊಟ್ಟಿದ್ದಾರೆ. ದಾವಾ ಸ್ವತ್ತು ಮಂಜೂರಾದ ಬಗ್ಗೆ ಮಂಜೂರಾತಿ ಪತ್ರ ಕೊಟ್ಟಿದ್ದಾರೆ. ಅದನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು, ಹಾಜರುಪಡಿಸಿಲ್ಲ, ಬೇಕಿದ್ದರೆ ಹಾಜರುಪಡಿಸುವುದಾಗಿ ನುಡಿಯುತ್ತಾರೆ. ಗ್ರಾಂಟ್ ಸರ್ಟಿಫಿಕೇಟ್ ಮತ್ತು ಎಂ.ಆರ್ ನಕಲು ನೋಡಿದ್ದೇವೆ. ಸದರಿ ದಾಖಲೆಗಳನ್ನು ಹೊರತು ಪಡಿಸಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ದಾಖಲೆಗಳನ್ನು ನೋಡಿಲ್ಲ.

ಗ್ರಾಂಡ್ ಸರ್ಟಿಫಿಕೇಟ್ ಮತ್ತು ಎಂ.ಆರ್ ನಕಲನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 3 ಮತ್ತು 4ನೇ ಪ್ರತಿವಾದಿಯರಿಗೆ ದಾವಾ ಸ್ವತ್ತಿನಲ್ಲಿ ಸಮಾನವಾದ ಹಕ್ಕು ಇದೆ ಎಂದರೆ ಸರಿ. ಅವರು ಕೂಡ ಸಹಿ ಹಾಕಿದ್ದಾರೆ. 3 ಮತ್ತು 4ನೇ ಪ್ರತಿವಾದಿಯರ ಕರಾರು ಪತ್ರಕ್ಕೆ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ಅವರು ಅಪ್ರಾಪ್ತ ವಯಸ್ಕರಾಗಿದ್ದು, ಅವರ ಪರವಾಗಿ 1ನೇ ಪ್ರತಿವಾದಿ ನೈಸರ್ಗಿಕ ಸಂರಕ್ಷಕರಾಗಿ ಸಹಿ ಹಾಕಿದ್ದಾರೆ. 1ನೇ ಪ್ರತಿವಾದಿ ವೈಯಕ್ತಿಕವಾಗಿ ಸಹಿ ಹಾಕಿದ್ದಾರೆಯೇ ಹೊರತು 3 ಮತ್ತು 4ನೇ ಪ್ರತಿವಾದಿಯರ ಸಂರಕ್ಷಕರಾಗಿ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಇದ್ದಾರೆ ಎಂಬ ಬಗ್ಗೆ ಯಾವುದೇ ದಾಖಲೆ ಕೊಡದೇ ಇದ್ದರೂ ಸಹ ಸ್ವಾಧೀನದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-5 ಮತ್ತು 6ರ ಕರಾರು ಪತ್ರಗಳನ್ನು ಸೃಷ್ಟಿ ಮಾಡಿಕೊಂಡು ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಕಾನೂನು ಬದ್ಧವಾಗಿ ಮತ್ತು ಕ್ರಮಬದ್ಧವಾಗಿ ನಿಪಿ-5 ಮತ್ತು 6ರ ಕ್ರಯದ ಕರಾರುಗಳನ್ನು ಮಾಡಿಕೊಂಡಿದ್ದಲ್ಲಿ ಸಕಾಲದಲ್ಲಿ ಪ್ರತಿವಾದಿಯರಿಗೆ ನೋಟಿಸ್ ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ದಾವೆಗೆ ಪೂರಕವಾಗಿ ದಾಖಲಾತಿಗಳನ್ನು ಕೊಡದೇ ಇರುವ ಕಾರಣ ಮತ್ತು ಹಾಜರುಪಡಿಸಿದ ದಾಖಲೆಗಳು ದೋಷಪೂರಿತವಾಗಿರುವ ಕಾರಣ ಈ ದಾವೆ ಕಾನೂನಿನ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.